(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಗೂ ಕೂಡ ಮೆಡಿಕಲ್ ಕಾಲೇಜು ಬೇಕಾಗುತ್ತದೆ. ESI ನಲ್ಲಿ ಎಲ್ಲರಿಗೂ admission ಸಿಗುವುದಿಲ್ಲ. ಇದರ ಬಗ್ಗೆ ನಾನು ಎರಡು-ಮೂರು ಬಾರಿ ಪ್ರಸ್ತಾಪ ಮಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ರಾಜು. ಕೆ : ಮಾನ್ಯ ಅಧ್ಯಕ್ಷರೆ, ...

(ಗೊಂದಲ)

ಅಧ್ಯಕ್ಷರು : ಮಾನ್ಯ ರಾಜುರವರೆ ದಯವಿಟ್ಟು ಕುಳಿತುಕೊಳ್ಳಿ, ಕರೆಯುವಾಗ ಬರುವುದಿಲ್ಲ. ಈಗ ಎದ್ದು ನಿಂತುಕೊಳ್ಳುತ್ತೀರಿ, ನೀವು ಕರೆಯುವಾಗ ಇರಲಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಕಾಕಾಸಾಹೇಬ ಪಾಂಡುರಂಗ ಪಾಟೀಲ್ ರವರು ಮಾತನಾಡುವುದು.

16) ವಿಷಯ : ನಿಪ್ಪಾಣಿ ಪುರಸಭೆಯ ಹಿಂದಿನ ಅಧ್ಯಕ್ಷರು ಹಾಗೂ ಆಯುಕ್ತರು ಅಧಿಕಾರ ದುರುಪಯೋಗ ಮಾಡಿ ಕೊಂಡು ಸಾರ್ವಜನಿಕ ಆಸ್ತಿಗೆ ನಷ್ಟ ಉಂಟು ಮಾಡಿರುವ ಬಗ್ಗೆ

ಶ್ರೀ ಕಾಕಾಸಾಹೇಬ ಪಾಂಡುರಂಗ ಪಾಟೀಲ್ : ನಿಪ್ಪಾಣಿ ನಗರ ಸಭೆಯ ಮಾಜಿ ಅಧ್ಯಕ್ಷರು ಹಾಗೂ ಆಯುಕ್ತರು ಸೇರಿ ನಿಪ್ಪಾಣಿ ನಗರದ ಬಹುತೇಕ heart of city ಅಶೋಕನಗರದಲ್ಲಿ ಉದ್ಯಾನವನಕ್ಕಾಗಿ ಜಾಗ ಬಿಡಲಾಗಿತ್ತು. ಅದನ್ನು ಯಾರ ಗಮನಕ್ಕೂ ತರದೇ ಹೈಕೋರ್ಟ್‌ನಲ್ಲಿ ಭೂ ಮಾಲೀಕರ ಜೊತೆಯಲ್ಲಿ ಒಪ್ಪಂದ ಮಾಡಿ, 52,000 ಚದರ ಅಡಿಗಳ ಜಾಗ ಭೂ ಮಾಲೀಕರು ಬಿಟ್ಟುಕೊಟ್ಟರು. ಇದರ ಬಗ್ಗೆ ಮಾನ್ಯ ಪೌರಾಡಳಿತ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ...

ನಿಪ್ಪಾಣಿ ನಗರದ ಮಧ್ಯಭಾಗದಲ್ಲಿರುವ ಸರ್ವೆ ನಂ.73/4–ಅ ಮತ್ತು 74–6–1 ರಲ್ಲಿಯ ಖಾಲಿ ಜಾಗವನ್ನು ನಗರ ಯೋಜನೆ ಪ್ರಾಧಿಕಾರದ ವತಿಯಿಂದ ಉದ್ಯಾನವನಕ್ಕೆ ಕಾಯ್ದಿರಿಸಿದ್ದು ಇದನ್ನು ಹಿಂದಿನ ನಗರಸಭೆಯ ಅಧ್ಯಕ್ಷರು ಹಾಗೂ ಹಿಂದಿನ ಪೌರಾಯುಕ್ತರಾದ ಶ್ರೀ. ಕೆಂಪಹನುಮಯ್ಯ ಇವರು ನಗರಸಭೆಯ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಚರ್ಚಿಸದೆ, ಸರ್ಕಾರದ ಅನುಮೋದನೆ ಪಡೆಯದೆ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಸಂಚಾರಿ ಪೀಠದಲ್ಲಿ ನಿವೇಶನದ ಮಾಲೀಕರ ಜೊತೆಗೂಡಿ ಖಾಲಿ ಜಾಗದ 51800 ಚದರ ಅಡಿಗಳ ಪೈಕಿ 12968.86 ಚದರ ಅಡಿ ಜಾಗವನ್ನು ನಗರಸಭೆಗೆ ಬಿಟ್ಟುಕೊಡುವಂತೆ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಅದರಂತೆ ನ್ಯಾಯಾಲಯವು ಈ ಒಡಂಬಡಿಕೆಗೆ ದಿನಾಂಕ: 28.10.2009 ರಂದು ಅನುಮೋದನೆ ನೀಡಿರುತ್ತದೆ. ಆದರೆ ಈ ಖಾಲಿ ಜಾಗದ ಸಂಬಂಧ ನಿಪ್ಪಾಣಿ ಜೆ.ಎಂ.ಸಿ. ನ್ಯಾಯಾಲಯ ಹಾಗೂ ಚಿಕ್ಕೋಡಿ ಜೆ.ಎಂ.ಸಿ. ನ್ಯಾಯಾಲಯದಲ್ಲಿ ಪ್ರಕರಣವು ನಿಪ್ಪಾಣಿ ನಗರಸಭೆಯ ಪರವಾಗಿ ಆಗಿರುತ್ತದೆ. ಆದರೆ ನಗರಸಭೆಗೆ 12968.86 ಚದರ ಅಡಿ ಬಿಟ್ಟುಕೊಡುವ ಬಗ್ಗೆ ಸಾಮಾನ್ಯ ಸಭೆಯ ಅನುಮೋದನೆ ಪಡೆದಿರುವುದಿಲ್ಲ.

ದಿನಾಂಕ: 28.10.2009 ರ ತೀರ್ಪಿನಲ್ಲಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವ ತಾರಾಚಂದ್ ಬಾಪೂಚಂದ ಷಹಾ ಮತ್ತು ಇತರೆ 9 ಜನರಿಗೆ 51800 ಚದರ ಅಡಿಯಲ್ಲಿ 38831.14 ಅಡಿ ಜಾಗವನ್ನು ಬಿಟ್ಟುಕೊಡಲು ಆದೇಶಿಸಲಾಗಿದೆ. ಮೇಲ್ಕಂಡಂತೆ ಒಡಂಬಡಿಕೆ ಮಾಡುವ ಮುನ್ನ ಕೌನ್ಸಿಲ್ ಸಭೆಯಲ್ಲಿ ವಿಷಯವನ್ನು ಮಂಡಿಸಿ ಪೂರ್ವಾನುಮತಿಯನ್ನು ಪಡೆಯದೆ ಜಾಗದ ಮಾಲೀಕರೊಂದಿಗೆ ಸ್ವಹಿತಾಸಕ್ತಿಯಿಂದ ಕೈಗೊಂಡಿರುವ ಕುರಿತು ಇವರುಗಳ ಮೇಲೆ ಕ್ರಿಮಿನಲ್ ದಾವೆಯನ್ನು ಹೂಡುವುದರ ಮೂಲಕ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ: 27.3.2012 ರಂದು ರಿವಿಷನ್ ಪಿಟಿಷನ್ ಸಂಖ್ಯೆ: 151/2012ನ್ನು ದಾಖಲಿಸಲಾಗಿದೆ. ಈ ಕುರಿತು ನ್ಯಾಯಾಲಯ ನೀಡುವ ತೀರ್ಪಿನಂತೆ ಕ್ರಮ ವಹಿಸಲಾಗುವುದು.

ಈ ಆರೋಪದಲ್ಲಿ ಭಾಗಿಯಾಗಿರುವ ಹಿಂದಿನ ಪೌರಾಯುಕ್ತರಾದ ಶ್ರೀ. ಕೆಂಪಹನುಮಯ್ಯ ಹಾಲಿ ನಿವೃತ್ತರಾಗಿದ್ದು ಇವರಿಗೆ ಜಿಲ್ಲಾಧಿಕಾರಿಗಳು, ಬೆಳಗಾಂ ಇವರು ದಿನಾಂಕ: 28.6.2011 ರಂದು ಕಾರಣ ಕೇಳುವ ನೋಟೀಸು ನೀಡಿರುತ್ತಾರೆ. ಹಿಂದಿನ ನಗರಸಭೆ ಅಧ್ಯಕ್ಷರಾದ ಶ್ರೀಮತಿ

ಶುಭಾಂಗಿ ಎಸ್ ಜೋಷಿ ಇವರಿಗೆ ವಿವರಣೆ ಸಲ್ಲಿಸಲು ಜಿಲ್ಲಾಧಿಕಾರಿಗಳು ನೋಟಿಸನ್ನು ಜಾರಿಗೊಳಿಸಿರುತ್ತಾರೆ.

ಶ್ರೀ ಕೆಂಪಹನುಮಯ್ಯ, ಹಿಂದಿನ ಪೌರಾಯುಕ್ತರು, ನಗರಸಭೆ ನಿಪ್ಪಾಣಿ ಇವರಿಗೆ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯುವಂತೆ ಮಹಾಲೇಖ ಪಾಲರಿಗೆ ಸೂಚನೆಯನ್ನು ನೀಡಲಾಗಿದೆ.

ಶ್ರೀ ಕಾಕಾಸಾಹೇಬ ಪಾಂಡುರಂಗ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ ವಿಷಯವಾಗಿದೆ. ಇದರಲ್ಲಿ 5–8 ಕೋಟಿ ರೂಪಾಯಿ ಗಳವರೆಗೂ ವ್ಯವಹಾರವಾಗಬಹುದು ಎಂದು ನಿಪ್ಪಾಣಿಯಲ್ಲಿ ಚರ್ಚೆ ಇದೆ. ಜನಜಾಗೃತಿ ವೇದಿಕೆ ಅಲ್ಲಿ ಸಾರ್ವಜನಿಕವಾಗಿ ಪ್ರತಿಭಟನೆ ಮಾಡಿದೆ. ಇದರ ಬದಲಾಗಿ ಸಾರ್ವಜನಿಕ ಉದ್ಯಾನಕ್ಕಾಗಿ ನಿಪ್ಪಾಣಿ ನಗರ ಸಭೆಯಲ್ಲಿ ನಾವು ಮತ್ತು ನಮ್ಮ ಸಂಸದರು ಎಲ್ಲರೂ ಸೇರಿ, ಎಲ್ಲರಿಗೂ ಹೇಳಿ petition ದಾಖಲು ಮಾಡಲು ಹೇಳಿದ್ದೇವೆ. ಆದರೂ ಕೂಡ ಸರ್ಕಾರವೂ ಇದರಲ್ಲಿ ಭಾಗಿಯಾಗಿ DMA or Deputy Commissioner, Belagum. ಇವರಿಗೆ ಸರ್ಕಾರದ ವತಿಯಿಂದ ಹೈಕೋರ್ಟ್‌ನಲ್ಲಿ petition ಮಾಡಿ, ಈ ಭೂಮಿಯನ್ನು ಉಳಿಸಿಕೊಳ್ಳುವ ಸಂಬಂಧ ಸರ್ಕಾರ ಅದಕ್ಕೆ ಮೊಕದ್ದಮೆ, ದಾವೆ ಹಾಕಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳಿಕೊ ಳ್ಳುತ್ತಿದ್ದೇನೆ. ಏಕೆಂದರೆ ಇದು ಬಹಳ ಮಹತ್ವದ ವಿಷಯವಾಗಿದೆ.

ಅಧ್ಯಕ್ಷರು : ಆಯಿತು, ಮಾನ್ಯ ಸಚಿವರು ಉತ್ತರ ಹೇಳಿ.

ಬಾಲಚಂದ್ರ ಲ. ಜಾರಕಿಹೋಳಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್‌ರವರು ಹೇಳಿದ ಹಾಗೆ, ಇದರಲ್ಲಿ ಜಿಲ್ಲಾಧಿಕಾರಿಯವರು ಹೈಕೋರ್ಟಿನಲ್ಲಿ ಪಿಟಿಷನ್ ಹಾಕಬೇಕೆಂಬ ಬೇಡಿಕೆ ಇದೆ. ಈ ವಿಚಾರದಲ್ಲಿ ನಾನು ಜಿಲ್ಲಾಧಿಕಾರಿ, ಬೆಳಗಾಂ ಅವರ ಜೊತೆಯಲ್ಲಿ ಖುದ್ದಾಗಿ ಮಾತನಾಡಿ ಅವರಿಗೆ ಈ ವಿಷಯವನ್ನು ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಆಯಿತು.